O.S.59/2017 Further Cross of PW 1

ದಿನಾಂಕ 05-02-2026 ರಂದು ಸಾಕ್ಷಿಗೆ ಪ್ರಮಾಣ ವಚನಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರೆದ ಪಾಟೀ ಸವಾಲು :** ಪ್ರತಿವಾದಿಗಳ ಪರ ಶ್ರೀ ಎ ಎಫ್ ಕೆ ವಕೀಲರಿಂದ.

ಪ್ರಸ್ತುತ ದಾವಾ ಆಸ್ತಿಯ ಬ್ಲಾಕ್ ನಂಬರ 268 ಇದೆ ಎಂದರೆ ಸರಿ. ನಿಮ್ಮ ತಂದೆಯ ಹೆಸರು ಮತ್ತು ಪ್ರತಿವಾದಿಯರ ತಂದೆಯ ಹೆಸರು ಅಪಸಾತ್ ವಾಟಣಿಯ ಪ್ರಕಾರ ಅವರವರ ಹಿಸ್ಸೆಗೆ ಅವರ ಹೆಸರು ದಾಖಲಾಗಿದೆ ಎಂದರೆ ಸಾಕ್ಷಿ ವಾಟಣಿ ಆಗಿಲ್ಲ, ನನ್ನ ಅಜ್ಜನ ಹೆಸರು ದಾಖಲೆಯಲ್ಲಿ ಮುಂದುವರೆದಿದೆ ಎನ್ನುತ್ತಾರೆ. ತೇರಗಾಂವ ಗ್ರಾಮದ ಎಮ್ ಇ ನಂಬರ 4589 ದಿನಾಂಕ 09-06-2018 ರಂದು ನೇದ್ದರ ಬಾಬತ್ತು ವಾದಿ ಮತ್ತು ಪ್ರತಿವಾದಿಯರ ತಂದೆಯವರು ಪೂಟ್ ಹಿಸ್ಸಾ ಮಾಡಿಕೊಡಲು ದಿನಾಂಕ 26-03-2002 ರಂದು ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ಅರ್ಜಿ ಸಲ್ಲಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆ ನಂತರ ಭೂ ದಾಖಲೆಗಳ ಸಹಾಯಕ ನಿರ್ದೇಶಕರು ದಾವಾ ಆಸ್ತಿಯನ್ನು ಅಳತೆ ಮಾಡಿ ಪಿಟಿ ಶೀಟ್ ತಯಾರಿಸಿ ತಹಶೀಲ್ದಾರ ರವರಿಗೆ ವಹಿಸಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ದಿನಾಂಕ 08-10-2002 ರಂದು ತಹಶೀಲ್ದಾರ ಹಳಿಯಾಳ ರವರು ಮಾಡಿದ ಆದೇಶದಂತೆ ಅವರವರ ಹಿಸ್ಸೆಯನ್ನು ಅವರವರ ಹೆಸರಿಗೆ ನಮೂದಿಸಲಾಗಿದೆ ಎಂದರೆ ಸರಿಯಲ್ಲ. ಭೂ ದಾಖಲೆಗಳ ಸಹಾಯಕ ನಿರ್ದೇಶಕರು ರವರು ನೀಡಿದ ಹಿಸ್ಸಾ ಫಾರಂ ನಂಬರ 12 ದಿನಾಂಕ 20-02-2003 ರ ಪ್ರಕಾರ ಎಮ್ ಇ ನಂಬರ 5084 ನಮೂದು ಮಾಡಲಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ತಹಶೀಲ್ದಾರ ಹಳಿಯಾಳ ರವರು ಆದೇಶ ಮಾಡಿದ ನಂತರ ನಮೂದಾದ ಎಮ್ ಇ ನಂಬರ 4589 ಮತ್ತು 5084 ಅನ್ನು ಸಹಾಯಕ ಕಮೀಷನರ್, ಕಾರವಾರ ರವರ ಮುಂದೆ ಪ್ರಶ್ನಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ತೇರಗಾಂವ ಗ್ರಾಮದ ಎಮ್ ಇ ನಂಬರ 4589 ದಿನಾಂಕ 09-06-1998

ರಂದು ಮಂಜೂರಿ ಆಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ, ನನ್ನ ಚಿಕ್ಕಪ್ಪನಿಗೆ ಗೊತ್ತು ಎನ್ನುತ್ತಾರೆ. ಸದರಿ ಎಮ್ ಇ ನಂಬರ 4589 ಅನ್ನು ನಮೂದು ಮಾಡಿ 17 ವರ್ಷಗಳ ನಂತರ ಪ್ರಸ್ತುತ ಅವಧಿ ಮೀರಿದ ದಾವೆಯನ್ನು ಹೂಡಿರುತ್ತೀರಿ ಎಂದರೆ ಸರಿಯಲ್ಲ. ಪ್ರತಿವಾದಿಯರು ನಿಮ್ಮ ಕಬ್ಜೆ ವಹಿವಾಟಿಗೆ ಅಡ್ಡಿ ಆತಂಕ ಪಡಿಸಿದಾಗ ಪೊಲೀಸ ಠಾಣೆಗೆ ದೂರು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಪ್ರತಿವಾದಿ 1 ರಿಂದ 3 ರವರು ನನಗೆ ಅಜ್ಜಂದಿರು ಆಗಬೇಕು. ಅವರು ಈಗ ಮರಣ ಹೊಂದಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಿಮಗೆ ದಾವಾ ಆಸ್ತಿಯ ಬಗ್ಗೆ ಯಾವುದೇ ಮಾಹಿತಿ ಇಲ್ಲ, ನೀವು ಕಬ್ಜೆ ವಹಿವಾಟಿನಲ್ಲಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗೆ ಸಂಬಂಧಿಸಿ ಸುಳ್ಳು ಸಾಧನೆ ಮಾಡುತ್ತೀದ್ದೀರಿ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂ., ಹಳಿಯಾಳ.